<u>ದಿಃ **30.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ. ಎಸ್.ಡಿ.ಎಂ ವಕೀಲರಿಂದಃ ಪ್ರತಿವಾದಿಯ ಪರವಾಗಿಃ</u>

**11)** ನಾನು 5 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನಮ್ಮ ತಂದೆಯಾದಂತಹ ಇವರಿಗೆ ಮೂರು ಜನ ಮಕ್ಕಳು ಇರುತ್ತೇವೆ, ಅವರ ಹೆಸರುಗಳೆಂದರೆ ಬಸವರಾಜ ಅಂದರೆ ನಾನು ಹಾಗೂ ಸುಭಾಷ ಹಾಗೂ ನಿಂಗಪ್ಪ ಎನ್ನುವ ನಾವು ಮೂರು ಜನ ಮಕ್ಕಳು ಇರುತ್ತೇವೆ ಅಂದರೆ ಸರಿ. ನಮ್ಮ ತಂದೆಯಾದಂತಹ ಮಹದೇವಪ್ಪ ಈತನಿಗೆ ಒಬ್ಬ ಹೆಣ್ಣುಮಗಳು ಸಹ ಇರುತ್ತಾಳೆ, ಈಗ ಪ್ರಸ್ತುತವಾಗಿ ಅವರ ಮದುವೆಯಾಗಿರುತ್ತದೆ. ಮಹಾದೇವಪ್ಪ ದಿನಾಂಕಃ 27.04.2016 ರಂದು ಮೃತಪಟ್ಟಿರುತ್ತಾನೆ. ನನ್ನ ತಾಯಿ ಚನ್ನಬಸಮ್ಮ ಈಕೆ ನಮ್ಮ ತಂದೆಯಾದಂತಹ ಮಹಾದೇವಪ್ಪ ಇವರು ಮೃತಪಡುವ ಮೊದಲೇ ಮೃತಪಟ್ಟಿದ್ದಾರೆ. ನಮ್ಮ ಕುಟುಂಬಕ್ಕೆ ಸರ್ವೆ ನಂಬರಃ 45/3 02 ಎಕರೆ 19 ಗುಂಟೆಯಷುಟ ಆಸ್ತಿಯು ನಮ್ಮ ತಂದೆಯಾದಂತಹ ಮಹದೇವಪ್ಪ ಈತನ ಹೆಸರಿನಲ್ಲಿ ಇರುತ್ತದೆ. ಅದೇ ರೀತಿ ದಾವಾ ಶೆಡ್ಯೂಲ್ ಬಿ ಇದರಲ್ಲಿ ಕಾಣಿಸಿದಂತಹ ಪಂಚಾಯತಿ ನಂಬರಃ 47 ಈ ಆಸ್ತಿಯೂ ಸಹ ನಮ್ಮ ತಂದೆಯಾದಂತಹ ಮಹಾದೇವಪ್ಪ ಇವರಿಗೆ ಸೇರಿದ್ದಾಗಿರುತ್ತದೆ.

**12)** ನಮ್ಮ ತಂದೆಗೆ ಈ ಪ್ರಕರಣದಲ್ಲಿರುವ ದಾವಾ ಆಸ್ತಿಗಳನ್ನು ಹೊರತುಪಡಿಸಿ ಇನ್ನುಳಿದ ಆಸ್ತಿಗಳು ಸಹ ಇದ್ದು, ಆ ಆಸ್ತಿಗಳಲ್ಲಿ ಪಾಲುವಾಟ್ನಿಯಾಗಿರುತ್ತದೆ. ಸರ್ವೆ ನಂಬರಃ 74/1 07 ಎಕರೆ 30 ಗುಂಟೆ ಇರುತ್ತದೆ. ದಾವಾ ಆಸ್ತಿಯಾದಂತಹ ಸರ್ವೆ ನಂಬರಃ 74 07 ಎಕರೆ 30 ಗುಂಟೆ ಆಸ್ತಿಯ ಮೊದಲಿನ ಸರ್ವೆ ನಂಬರಃ 74/2 ಅ ಅಂತಾ ಇರುತ್ತದೆ. ದಾವಾ ಆಸ್ತಿಯಿದಂತಹ ಸರ್ವೆ ನಂಬರಃ 74/2 ಅ ಈ ಆಸ್ತಿಗೆ ಸಂಬಂದಪಟ್ಟಂತೆ ನಮ್ಮ ಅಣ್ಣ ನಿಂಗಪ್ಪ ಮತ್ತು ಸಹೋದರಿಯಾದಂತಹ ಇವರೆಲ್ಲರೂ ಸರ್ವೆ ನಂಬರಃ 74/2 ಅ ಈ ಆಸ್ತಿಗೆ ಕುರಿತಂತೆ ಹಾವೇರಿಯ ನ್ಯಾಯಾಲಯದಲ್ಲಿ ಸಿವಿಲ್ ಪ್ರಕರಣವನ್ನು

ನನ್ನ ತಮ್ಮ ಮತ್ತು ನಮ್ಮ ತಂದೆಯ ಮೇಲೆ ದಾವಾ ಮಾಡಿದ್ದರು ಅಂದರೆ ಸರಿ. ಸದರಿ ದಾವಾ ಆಸ್ತಿಯಾದಂತಹ ಸರ್ವೆ ನಂಬರಃ 74/2ಅ ಈ ಆಸ್ತಿಯಲ್ಲಿ ನ್ಯಾಯಾಲಯವು ನಮ್ಮ ತಂದೆ ಮತ್ತು ನಮ್ಮ ಸಹೋದರನಾದ ನಿಂಗಪ್ಪ ಮತ್ತು ಇನ್ನುಳಿದ ಕುಟುಂಬ ಸದಸ್ಯರ ನಡುವೆ ಸಿವಿಲ್ ಪ್ರಕರಣದಲ್ಲಿ ರಾಜಿ ಡಿಕಿರಯಾಗಿ ರಾಜಿ ಪ್ರಕಾರ ನನಗೆ 01 ಎಕರೆ 22 ಗುಂಟೆ, ಸುಭಾಷ ಇವರಿಗೆ 01 ಎಕರೆ 22 ಗುಂಟೆ, ಅದೇ ರೀತಿ ನಿಂಗಪ್ಪನಿಗೂ ಸಹ 01 ಎಕರೆ 22 ಗುಂಟೆ, ಅದೇ ರೀತಿ ನಮ್ಮ ಸಹೋದರಿಯಾದ ಸುಮಾ ಈಕೆಗೂ ಸಹ 01 ಎಕರೆ 22 ಗುಂಟೆ, ಅದೇ ರೀತಿ ನಮ್ಮ ತಂದೆಯಾದಂತಹ ಮಹಾದೇವಪ್ಪ ಇವರಿಗೂ ಸಹ 01 ಎಕರೆ 22 ಗುಂಟೆ ಆಸ್ತಿಯು ಸದರಿ ರಾಜಿ ಡಿಕ್ರಿಯ ಪ್ರಕಾರ ಬಂದಿರುತ್ತದೆ.

**13)** ಸದರಿ ಸಿವಿಲ್ ದಾವೆಯು ದಿನಾಂಕಃ 15.03.2011 ರಂದು ರಾಜಿ ಡಿಕ್ರಿಯ ಪ್ರಕಾರ ಪಾಲುವಾಟ್ನಿಯಾಗಿರುತ್ತದೆ ಅಂದರೆ ಸರಿ. ಅದೇ ರೀತಿ ದಾವಾ ಆಸ್ತಿಯಾದಂತಹ ಸರ್ವೆ ನಂಬರಃ 74/2ಅ ಈ ಆಸ್ತಿಗೆ ಸಂಬಂದಪಟ್ಟಂತೆ ಸಂಪೂರ್ಣ 07 ಎಕರೆ 30 ಗುಂಟೆ ಆಸ್ತಿಗೆ ಸಂಬಂದಪಟ್ಟಂತೆ ಒಬ್ಬ ವಸಂತ ಸಾನು ಇವರಿಗೆ ಖರೀದಿ ಕರಾರು ಪತ್ರವನ್ನು ಬರೆದುಕೊಡಲಾಗಿತ್ತು ಅಂದರೆ ಸರಿಯಲ್ಲ. ಅದೇ ರೀತಿ ನಮ್ಮ ತಂದೆಯಾದಂತಹ ಮಹಾದೇವಪ್ಪ ಮತ್ತು ನಾವೆಲ್ಲರೂ ಸೇರಿ ಹಾವೇರಿಯ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ಇದ್ದಂತಹ ಸಿವಿಲ್ ಪ್ರಕರಣವೂ ಚಾಲ್ತಿಯಲ್ಲಿರುವಾಗ ನಮ್ಮ ತಂದೆ ಮಹಾದೇವಪ್ಪ ಈತನು ಒಬ್ಬನೇ ದಿನಾಂಕಃ 09.03.2009 ನೇ ಇಸ್ವಿಯಂದು ನೊಂದಾಯಿತ ಖರೀದಿ ಪತ್ರದ ಮುಖಾಂತರ ಸಾನು ಎನ್ನುವವರಿಗೆ ಮಾರಾಟ ಮಾಡಿದ್ದಾನೆ ಅಂದರೆ ಸರಿಯಲ್ಲ. ಆ ರೀತಿ ಸಿವಿಲ್ ಪ್ರಕರಣ ಚಾಲ್ತಿಯಲ್ಲಿದ್ದಾಗ ದಾವಾ ಆಸ್ತಿಯಾದ ಸರ್ವೆ ನಂಬರಃ 74/2ಅ ಈ ಆಸ್ತಿಗೆ ಸಂಬಂದಪಟ್ಟಂತೆ ಸದರಿ ಸಿವಿಲ್ ದಾವೆಯಲ್ಲಿ ರಾಜಿಯಾಗುವ ಮತ್ತು ರಾಜಿ ಡಿಕ್ರಿಯ ಆಗುವ ಪೂರ್ವದಲ್ಲಿ ಸಂಪೂರ್ಣ ಆಸ್ತಿಯನ್ನು ಖರೀದಿಗೆ ಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ.

**14)** ಸದರಿ ಸರ್ವೆ ನಂಬರಃ 74/2ಅ ಈ ಆಸ್ತಿಯನ್ನು ನಮ್ಮ ತಂದೆಯಾದಂತಹ ಮಹಾದೇವಪ್ಪ ಈತನು ದಿನಾಂಕಃ 09.03.2009 ರಂದು ಖರೀದಿ ಪತ್ರ ಮಾಡಿಕೊಟ್ಟ ನಂತರ ನಾವು ಸಿವಿಲ್ ಪರಕರಣದಲ್ಲಿ ರಾಜಿಯಾಗಿ ಮೇಲೆ ಹೇಳಿದ ಸರ್ವೆ ನಂಬರಃ 74/2ಅ ಒಟುಟ 07 ಎಕರೆ 30 ಗುಂಟೆ ಆಸ್ತಿಯಲ್ಲಿ ರಾಜಿ ಪಾಲುವಾಟ್ನಿ ಮಾಡಿಕೊಂಡಿರುತ್ತೇವೆ ಅಂದರೆ ಸರಿ. ಏಕೆಂದರೆ ನಮ್ಮ ತಂದೆಯಾದಂತಹ ಸದರಿ ಆಸ್ತಿಯನ್ನು ಖರೀದಿಗೆ ಕೊಟ್ಟಿದ್ದರಿಂದ ಆ ವಿಷಯ ನಮಗೆ ಗೊತ್ತಿರುವದಿಲ್ಲ. ಆ ನಂತರ ಹಾವೇರಿಯಲ್ಲಿರುವ ಸಿವಿಲ್ ನ್ಯಾಯಾಲಯದಲ್ಲಿ ನಾನು ಮತ್ತು 1ನೇ ಪ್ರತಿವಾದಿ ನಿಂಗಪ್ಪ ಮತ್ತು 2ನೇ ಪ್ರತಿವಾದಿಯಾದಂತಹ ಸುಭಾಷ ಮತ್ತು 3ನೇ ಪ್ರತಿವಾದಿಯಾದಂತಹ ಸುಮಾ ಎಲ್ಲರೂ ಸೇರಿ ದಾವಾ ಸರ್ವೆ ನಂಬಃ 74/2ಅ ಎಲ್ಲರೂ ಸೇರಿ ಘೋಷಣಾತ್ಮಕ ಡಿಕ್ರಿ ಮಾಡಲು ನಮ್ಮ ತಂದೆಯಾದಂತಹ ಮಹಾದೇವಪ್ಪ ಮತ್ತು ನಾನು ಅವರ ವಿರುದ್ದ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಲಾಗಿತ್ತು ಅಂದರೆ ಸರಿ. ಸದರಿ ಸರ್ವೆ ನಂಬರಃ 74/2ಅ ಈ ಆಸ್ತಿಯೂ ಈ ದಾವೆಯನ್ನು ದಾಖಲುಪಡಿಸುವ ಪೂರ್ವದಲ್ಲಿ ಪೋಡಿಯಾಗಿ ಅದಕ್ಕೆ ಸರ್ವೆ ನಂಬರಃ 74/2 ಅ ಈ ಅಸ್ತಿಯೂ ಸರ್ವೆ ನಂಬರಃ 74/1 ಅಂತಾ ಬದಲಾಗಿರುತ್ತದೆ ಅಂದರೆ ಸರಿ.

**15)** ಅದೇ ರೀತಿ ಈ ದಾವೆಯಲ್ಲಿ ಇರುವಂತಹ ದಾವೆ ನಂಬರಃ 87/2011 ಹಾವೇರಿಯ ಸಿವಿಲ್ ನ್ಯಾಯಾಲಯದಲ್ಲಿ ನನ್ನ ತಂದೆ ಮಹಾದೇವಪ್ಪ ಮತ್ತು ವಸಂತ ನಾನು ಇಬ್ಬರ ವಿರುದ್ದ ಸೇರಿ ಸಿವಿಲ್ ಪ್ರಕರಣ ದಾಖಲುಪಡಿಸಲಾಗಿತ್ತು ಅಂದರೆ ಸರಿ. ಸದರಿ ದಾವೆಯು ದಿನಾಂಕಃ 13.03.2013 ನೇ ಇಸ್ವಿಯಂದು ಸದರಿ ಸರ್ವೆ ನಂಬರಃ 74/1 ಈ ಆಸ್ತಿಗೆ ಸಂಬಂದಪಟ್ಟಂತೆ ತೀರ್ಪು ಆಗಿತ್ತು ಅಂದರೆ ಸರಿ. ಅದೇ ರೀತಿ ಸರ್ವೆ ನಂಬರಃ 74/1 ಈ ಆಸ್ತಿಗೆ ಸಂಬಂದಪಟ್ಟಂತೆ ಆದ ದಾವೆಯಲ್ಲಿ ತೀರ್ಪಿನ ಮೇಲೆ ವಸಂತ ನಾನು ಈತನು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಇಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದರು ಅಂದರೆ ಸರಿ.

**16)** ಅದೇ ರೀತಿ ನಾವು ವಸಂತ ಸಾನು ಈತನು ವಿರುದ್ದ ಗೌರವಾನ್ವಿತ ಉಚ್ಚ ನ್ಯಾಯಾಲಯ ಧಾರವಾಡ ಇಲ್ಲಿ ಆರ್.ಎಫ್.ಎ ನಂಬರಃ 100013/2015 ಈ ಮೇಲ್ಮನವಿಯನ್ನು ಸಲ್ಲಿಸಲಾಗಿತ್ತು ಅಂದರೆ ಸರಿ. ನಾವು ಸಲ್ಲಿಸಿದಂತಹ ಆರ್.ಎಪ. ಎ ನಂಬರಃ 100013/2015 ಮತ್ತು ಆರ್.ಎಫ್.ಎ ನಂಬರಃ 410003/2013 ಎರಡು ಒಟ್ಟಾಗಿ ಸೇರಿಸಿ ತೀರ್ಪು ಆಗಿರುತ್ತದೆ ಅಂದರೆ ಸರಿ. ಸದರಿ ಎರಡು ಮೇಲ್ಮನವಿಗಳಲ್ಲಿ ವಸಂತ ಸಾನು ಈತನಿಗೆ ಬರೆದುಕೊಟ್ಟ ಖರೀದಿ ಪತ್ರವು ಸಿಂದು ಆಗಿರುತ್ತದೆ ಎಂದು ತೀರ್ಪು ಮಾಡಲಾಗಿರುತ್ತದೆ ಅಂದರೆಸ ರಿ. ಸಾಕಿವ್ಷಿಯು ಮುಂದುವರೆದು ಎರಡು ಪ್ರಕರಣಗಳಲ್ಲಿ ವಸಂತ ಸಾನು ದಾವಾ ಆಸ್ತಿಗೆ ಮಾಲೀಕನಾಗಿರುತ್ತಾನೆ ಎಂದು ತೀರ್ಪು ಆಗಿರುತತದೆ ಮತ್ತು ಸದರಿ ಎರಡು ಪ್ರಕರಣಗಳಲ್ಲಿ ನಮ್ಮ ತಂದೆ ಮತ್ತು ನಮ್ಮ ಎಲ್ಲ ಸಹೋದರರ ಮದ್ಯ ಮೇಲೆ ಹೇಳಿದ ಎರಡೂ ಪರಕಣಗಳಲ್ಲಿ ದಾವಾ ಆಸ್ತಿಯಾದಂತಹ ಸರ್ವೆ ನಂಬರಃ 74/2ಅ ಈ ಆಸ್ತಿಗೆ ಸಂಬಂದಪಟ್ಟಂತೆ ನಾವೆಲ್ಲರೂ ಕಬ್ಜೆಯಲ್ಲಿ ಎಂದು ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ ಎಂದು ತೀರ್ಪು ಆಗಿರುತ್ತದೆ ಎಂದು ಸಾಕ್ಷಿಯು ನುಡಿಯುತ್ತಾರೆ.

**17)** ಸದರಿ ತೀರ್ಪು ಆದ ನಂತರ ಸರ್ವೆ ನಂಬರಃ 74/2ಅ ಈ ಅಸ್ತಿಗೆ ಸಂಬದದಸಿ ಪೋಡಿಯಾಗಿ ಸರ್ವೆ ನಂಬರಃ 74/1 01 ಎಕರೆ 22 ಗುಂಟೆ ಸರ್ವೆ ನಂಬರಃ 74/10 01 ಎಕರೆ 22 ಗುಂಟೆ, ಸರ್ವೆ ನಂಬರಃ 74/11 01 ಎಕರೆ 2 ಗುಂಟೆ, ಸರ್ವೆ ನಂಬರಃ 74/12 01 ಎಕರೆ 22, ಸರ್ವೆ ನಂಬರಃ 74/12 01 ಎಕರೆ 22 ಗುಂಟೆಯಷ್ಟು ತೀರ್ಪು ಆಗಿತ್ತು ಅಂದರೆ ಸರಿ. ಸದರಿ ತೀರ್ಪು ಆದ ನಂತರ ಸರ್ವೆ ನಂಬರಃ 74/1 ಇದರಲ್ಲಿ ಪೋಡಿಯಾಗಿ ನಂತರ ಮೇಲೆ ಹೇಳಿದಂತೆ ಅವುಗಳಿಗೆ ಪ್ರತ್ಯೇಕವಾದಂತಹ ಸರ್ವೆ ನಂಬರಗಳನ್ನು ಕೊಟ್ಟು ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ 5 ಪಹಣಿ ಪತ್ರಿಕೆಗಳಲ್ಲಿ ಕಾಲಂ ನಂಬರಃ 9ರಲ್ಲಿ ವಸಂತ ಸಾನು ಇವರ ಹೆಸರಿನಲ್ಲಿ ಬದಲಾವಣೆಯಾಗಿರುತ್ತದೆ ಅಂದರೆ ಸಾಕ್ಷಿಯು ಅದು ಖೊಟ್ಟಿಯಾಗಿ ದಾಖಲಾಗಿರುತ್ತದೆ ಎಂದು ಮುಂದುವರೆದು ನುಡಿಯುತ್ತಾರೆ.

**18)** ಸದರಿ ತೀರ್ಪಿನ ಪ್ರಕಾರ ಸರ್ವೆ ನಂಬರಃ 74/1 ಈ ಆಸ್ತಿಯಲ್ಲಿ ಆದಂತಹ ಸಂಪೂರ್ಣ ಆಸ್ತಿಗಳಲ್ಲಿ ಆದಂತಹ ಪೋಡಿಯ ಪ್ರಕಾರ ಪ್ರತ್ಯೇಕವಾಗಿ ಕೊಟ್ಟಂತಹ ಸರ್ವೆ ನಂಬರಗಳು ವಸಂತ ಸಾನು ಈತನಿಗೆ ಸಂಬಂದಪಟಟಂತೆ ಪಹಣಿ ಪತ್ರಿಕೆಯಲ್ಲಿರುವ ಕಾಲಂ ನಂಬರಃ 9ರಲ್ಲಿ ವರ್ಗಾವಣೆಯಾಗಿತ್ತು ಅಂದರೆ ಸರಿಯಲ್ಲ . ಸರ್ವೆ ನಂಬರಃ 74/1ಬ ಈ ಆಸ್ತಿಯಲ್ಲಿ ನಾವು ರಾಜಿ ಡಿಕ್ರಿಯ ಆದಂತಹ ಆದೇಶದ ಪ್ರಕಾರ ಈ ಪ್ರಕರಣದ ದಾವಾ ಆಸ್ತಿಗಳು ಇರಲಿಲ್ಲ ಅಂದರೆ ಸಾಕ್ಷಿಯು ಈ ಪ್ರಕರಣಕ್ಕೂ ಮತ್ತು ಈ ಹಿಂದೆ ಮಾಡಲಾದ ವಾಟ್ನಿ ದಾವೆಗೂ ಯಾವುದೇ ರೀತಿ ಸಂಬಂದ ಇರುವದಿಲ್ಲ ಎಂದು ಮುಂದುವರೆದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಕಾಣಿಸಿದಂತಹ ಸರ್ವೆ ನಂಬರಃ 45/3ಎ ಮತ್ತು ವಿ.ಪಿ.ಸಿ ನಂಬರಃ 47 ಮನೆ ನಮ್ಮ ತಂದೆಗೆ ಪಾಲುವಾಟ್ನಿಯಲ್ಲಿ ಬಂದಿರುತ್ತವೆ ಅಂದರೆ ಸರಿ ಮತ್ತು ಎರಡೂ ಆಸ್ತಿಗಳು ನಮ್ಮ ಹಿರಿಯರ ಆಸ್ತಿಗಳು ಆಗಿರುತ್ತವೆ ಅಂದರೆ ಸರಿ.

**19)** ಎರಡೂ ಆಸ್ತಿಗಳು ನಮ್ಮ ತಂದೆಯಾದಂತಹ ಮಹಾದೇವಪ್ಪ ಇವರಿಗೆ ಇರಲಿ ಎಂದು ಬಿಟ್ಟುಕೊಟ್ಟಂತಹ ಆಸ್ತಿಗಳು ಆಗಿರುತ್ತವೆ ಅಂದರೆ ಸರಿಯಲ್ಲ. ಈ ಹಿಂದೆ ಹೇಳಿದ ದಾವೆಯಲ್ಲಿ ಸರ್ವೆ ನಂಬರಃ 74/1 ಈ ಆಸ್ತಿಗಳಲ್ಲಿ ಪಾಲುವಾಟ್ನಿಯಾದ ನಂತರ ನಾವೆಲ್ಲರೂ ಸಹೋದರರೂ ಈಗಲೂ ಸಹ ಪ್ರತ್ಯೇಕವಾಗಿ ವಾಸಿಸಿಕೊಂಡು ಬರುತ್ತಿದ್ದೇವೆ ಅಂದರೆ ಸರಿ. ಸದರಿ ಸಿವಿಲ್ ಪ್ರಕರಣದಲ್ಲಿ ರಾಜಿ ಡಿಕ್ರಿಯಾದ ನಂತರ ನಾನು ಹಾವೇರಿಯಲ್ಲಿಯೇ ಒಂದು ಮನೆಯಲ್ಲಿ ಬಾಡಿಗೆ ಇದ್ದೇನು ಅಂದರೆ ಸರಿ, ಈಗ ಪ್ರಸ್ತುತವಾಗಿ ದೇವಗಿರಿ ಯಲ್ಲಾಪುರದಲ್ಲಿರುವ ನನ್ನ ತೋಟದಲ್ಲಿ ಮನೆಯನ್ನು ಮಾಡಿಕೊಂಡು ವಾಸ ಇದ್ದೇನೆ. ಸರ್ವೆ ನಂಬರಃ 74/1 ಈ ಅಸ್ತಿಯಲ್ಲಿ ಒಂದು ಮನೆ ಮಾಡಿಕೊಂಡು ಬರುತ್ತಿದ್ದೇನೆ ಎಂದು ಮುಂದುವರೆದು ನುಡಿಯುತಾತರೆ. ನನ್ನ ಹಿರಿಯ ಸಹೋದರ ನಿಂಗಪ್ಪ ಈತನು ಜವಾಹರ ನವೋದಯ ಶಾಲೆಯಲ್ಲಿ ಹಾನಗಲ್ ತಾಲೂಕು ಗುಂಡೂರು ಮಹಾರಾಜಪೇಟ ಮದ್ಯ ಇರುವಂತಹ ಸದರಿ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದ ಅಂದರೆ ಸರಿ. ಸದರಿ ನನ್ನ ಹಿರಿಯ ಸಹೋದರ ನಿಂಗಪ್ಪ

ಈತನು ಜವಾಹರ ನವೋದಯ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದರಿಂದ ಸದರಿ ಶಾಲೆಯ ಕ್ವಾಟ್ರಸ್‌ನಲ್ಲಿ ವಾಸ ಮಾಡುತ್ತಾ ಇದ್ದಾನೆ ಅಂದರೆ ಸರಿ. ನನ್ನ ಹಿರಿಯ ಸಹೋದರನಾದ ನಿಂಗಪ್ಪ ಈತನು 2-3 ತಿಂಗಳ ಹಿಂದೆ ನಿವೃತ್ತಿಯಾಗಿದ್ದಾನೆ. ನಿಂಗಪ್ಪ ಈತನು ಈಗ ದೇವಗಿರಿ ಯಲ್ಲಾಪುರದಲ್ಲಿ ಬಾಡಿಗೆ ಮನೆಯಲ್ಲಿ ವಾಸ ಮಾಡಿಕೊಂಡಿದ್ದಾನೆ.

**20)** ಈ ಹಿಂದೆ ಸಲ್ಲಿಸಲಾದ ಸಿವಿಲ್ ನ್ಯಾಯಾಲಯದ ಪ್ರಕರಣದಲ್ಲಿ ರಾಜಿ ಡಿಕ್ರಿಯಾದ ನಂತರ ನನ್ನ ಸಹೋದರನಾದ 2 ನೇ ಪ್ರತಿವಾದಿ ಸುಭಾಷ ಮತ್ತು ಆತನ ಹೆಂಡತಿ ಮತ್ತು ನನ್ನ ತಂದೆ ಮಹಾದೇವಪ್ಪ ದೇವಗಿರಿ ಯಲ್ಲಾಪುರದಲ್ಲಿರುವ ಮನೆಯಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದಾರೆ ಅಂದರೆ ಸರಿಯಲ್ಲ. ಆದರೆ ನನ್ನ ತಂದೆ ಮಹಾದೇವಪ್ಪ ಈತನು ಪ್ರತ್ಯೇಕವಾಗಿ ವಾಸಿಸಿಕೊಂಡು ಬರುತ್ತಿದ್ದಾರೆ ಎಂದು ನುಡಿಯುತ್ತಾರೆ ಮತ್ತು ಸಾಕ್ಷಿಯು ಮುಂದುವರೆದು ಈ ಪರಕಣದಲ್ಲಿ ದಾವಾ ಆಸ್ತಿ ಮನೆ ನಂಬರಃ 35/ಬಿ ಈ ಅಸ್ತಿಯಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದ ಎಂದು ಮುಂದುವರೆದು ನುಡಿಯುತ್ತಾರೆ. ವಿ.ಪಿ.ಸಿ ನಂಬರಃ 35/ಬಿ ಈ ಆಸ್ತಿಯು ಈಗಲೂ ಖಾಲಿ ಇರುತ್ತದೆ ಮತ್ತು ಖುಲ್ಲಾ ಜಾಗೆ ಇರುತ್ತದೆ.

**21)** ನಮ್ಮ ತಂಗಿಯಾದಂತಹ ಸುಮಾ ಈಕೆಯನ್ನು ರಾಣೇಬೆನ್ನೂರ ತಾಲೂಕಿನ ಹೊಸಚಂದಾಪುರ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದೇವೆ. ನನ್ನ ಸಹೋದರಿಯಾದಂತಹ ಸುಮಾ ಮತ್ತು ಆಕೆಯ ಗಂಡನ ಜೊತೆ ವೈವಾಹಿಕ ಸಂಬಂದ ಸರಿ ಇಲ್ಲದೇ ಇದ್ದುದರಿಂದ ನನ್ನ ಸಹೋದರಿಯಾದ ಸುಮಾ ಈಕೆ ಆಕೆಯ ಗಂಡನ ಮನೆಯನ್ನು ಬಿಟ್ಟು ಈಗ ಪ್ರಸ್ತುತವಾಗಿ ದೇವಗಿರಿ ಯಲ್ಲಾಪುರ ಗ್ರಾಮದಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದಾರೆ. ನನ್ನ ಸಹೋದರಿಯಾದ ಸುಮಾ 2002 ರಿಂದ ದೇವಗಿರಿ ಯಲ್ಲಾಪುರದಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದಾಳೆ. ಆ ರೀತಿ ನನ್ನ ಸಹೋದರಿ ಸುಮಾ 2002 ನೇ ಇಸ್ವಿಯಲ್ಲಿ ದೇವಗಿರಿಯಲ್ಲಾಪುರ ಇಲ್ಲಿರುವಂತಹ ಮನೆಯಲ್ಲಿ ವಾಸಿಸಲು ಬಂದಾಗ ಅದಕ್ಕಿಂತ ಪೂರ್ವದಲ್ಲಿ ನಮ್ಮ

ಸಹೋದರನಾದ ಸುಭಾಷ ಮತ್ತು ನನ್ನ ಸಹೋದರಿಯಾದಂತಹ ಸುಮಾ ದೇವಗಿರಿಯಲ್ಲಾಪೂರ ಕೂಡಿಯೇ ವಾಸ ಮಾಡಿಕೊಂಡು ಬರುತ್ತಿದ್ದರು ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಸಹೋದರಿಯಾದಂತಹ ಸುಮಾ ಈಕೆ ವಿ.ಪಿ.ಸಿ ನಂಬರಃ 35/2 ಈ ಆಸ್ತಿಯಲ್ಲಿ ಕಟ್ಟಿಸಿದಂತಹ ಮನೆಯಲ್ಲಿ ವಾಸ ಮಾಡುತ್ತಾ ಬರುತ್ತಿದ್ದಾಳೆ ಎಂದು ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ಅವಕಾಶ ಕೇಳಲಾಗಿ, ಅವಕಾಶ ಕೊಡಲಾಯಿತು

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.